ವಾರದ ಪತ್ರ

## ಕಡಿವಾಣವಿಲ್ಲದ ಕುದುರೆ

ನಟ ಜಗ್ಗೇಶ್ 'ಕಾಮಿಡಿ ಕಿಲಾಡಿ' ತಂಡವನ್ನು ಬಳಸಿಕೊಂಡು 'ಕಾಮಿಡಿ ಕುಟುಂಬ' ಎಂಬ ಕಾರ್ಯಕ್ರಮವನ್ನು ನೀಡುತ್ತಿರುವುದು ಸಂತೋಷದ ವಿಷಯ. ಆದರೆ, ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದಲ್ಲಿ ಅಶ್ಲೀಲ ದೃಶ್ಯಗಳು ಹಾಗೂ ದ್ವಂದ್ವಾರ್ಥ ಪದಗಳು ಹದ್ದುಬಸ್ತಿನಲ್ಲಿರುತ್ತಿತ್ತು. ಈಗ ಹಾಗಿಲ್ಲ. ಅಶ್ಲೀಲ ದೃಶ್ಯಗಳು, ದ್ವಂದ್ವಾರ್ಥ ಪದಗಳು ಮೀತಿ ಮೀರಿವೆ. ಗಂಡಸರು ಹೆಂಗಸರಂತೆ ಸೀರೆಯಲ್ಲಿ ಅಭಿನಯಿಸುವ ರೀತಿಗೆ ಮನೆಯಲ್ಲಿ ಸ್ವತಃ ಹೆಂಗಸರು ಥೂ, ಛೀ ಎನ್ನುತ್ತಾರೆ. ಅದನ್ನು ಅಲ್ಲಿ ಕುಳಿತು ಆಸ್ವಾದಿಸುವುದು ಸಹ್ಯ ಅನ್ನಿಸುವುದಿಲ್ಲ. ಆಗಾಗ ಅವರ ತಬ್ಳೋ, ಅಪ್ಪೊ, ಚಿಂದಿ ಉಡಾಯ್ಸು ಇನ್ನೂ ಅನೇಕ ನುಡಿಮುತ್ತುಗಳು ವೀಕ್ಷಕರ ಪಾಲಿಗೆ ಕರ್ಣ ಕಠೋರ. ಅಲ್ಲದೆ, ಅನೇಕ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಅವರು ಮಕ್ಕಳು ಎಂಬುದನ್ನು ಮರೆತು 'ನಿಮ್ಮ ಅಪ್ಪ ಪಕ್ಕದ ಮನೆ ಆಂಟಿಗೆ ಡೌ ಹೊಡೆಯುತ್ತಾನೆ. ನಿಮ್ಮ ತಾಯಿನೂ ಹಾಗೆ ಹೀಗೆ...' ಎಂದು ಮಕ್ಕಳ ಮುಂದೆಯೇ ಮಾತನಾಡುತ್ತಾರೆ. ಇದು ಎಷ್ಟರ ಮಟ್ಟಿಗೆ ಸರಿ  ಎಂಬುದನ್ನು ಸ್ವತಃ ಜಗ್ಗೇಶ್‌ರವರೇ ಹೇಳಬೇಕು.

ಹಾಸ್ಯ ಹಾಸ್ಯವಾಗೇ ಇರಲಿ. ಅಲ್ಲಿ ಅಶ್ಲೀಲ ಬೇಡ. ದೊಡ್ಡವರ ಜೊತೆ ಮಕ್ಕಳು ಕಾರ್ಯಕ್ರಮ ನೋಡುವಾಗ ಕೆಲವು ಅಶ್ಲೀಲ ಪದಗಳಿಗೆ ಹಾಗೆಂದರೇನು ಎಂದಾಗ ಉತ್ತರ ನೀಡಲು ಆಗದೆ ಟಿ.ವಿ. ಬಂದ್ ಮಾಡೋಣ ಎನಿಸುತ್ತದೆ. ಅಶ್ಲೀಲ ಪದಗಳಿಗೆ ಕಡಿವಾಣ ಹಾಕಲಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅಂತೂ ವನವಾಸಕ್ಕೆ...

ಕೊನೆಗೂ 'ಸರಳ ಜೀವನ' ವಾಹಿನಿಯ ದಶರಥ ಕಣ್ಣೀರು ಕಡಿಮೆ ಮಾಡಿದ್ದಾನೆ. ಕೈಕೇಯಿ ಕೂಗಾಟ. ಕಿರುಚಾಟ ನಿಲ್ಲಿಸಿ ಮಂದಹಾಸ ಬೀರಿದ್ದಾಳೆ. ರಾಮ, ಸೀತೆ, ಲಕ್ಷ್ಮಣ ಎಲ್ಲರೂ ಕಾದುಕೊಂಡಿರುವ ದೋಣಿಯಲ್ಲಿ ಕೂತು ವನವಾಸಕ್ಕೆ ಹೊರಟಿದ್ದಾರೆ. ಈ ಹಂತಕ್ಕೆ ಕಥೆ ತಲುಪಲು ಅದೆಷ್ಟು ಕಾಲ ವೀಕ್ಷಕರು ಕಾಯಬೇಕಾಯಿತೋ. ಸಾಮಾನ್ಯವಾದ ವೇಗದಲ್ಲಿ ಚಿತ್ರೀಕರಿಸಿದ್ದರೆ ಇಷ್ಟು ಹೊತ್ತಿಗೆ ವನವಾಸ ಮುಗಿದು ಕಥೆ ಮುಂದೆ ಸಾಗಿರಬೇಕಿತ್ತು.

—ಶ್ರೀನಾಥ್ ಕೊನೇಟಿ

## ವಿಕೃತ ಸಂಸ್ಕೃತಿಗೆ ಕೊನೆಯೆಂದು?

ದಂಡುಪಾಳ್ಯ–2 ಚಿತ್ರದಲ್ಲಿ ನಟಿಯೊಬ್ಬರು ವಿವಸ್ತ್ರಳಾಗಿ ನಟಿಸಿದ್ದಾರೆ ಎನ್ನುವ ಸೆನ್ಸಾರ್‌ಗೊಂಡ ದೃಶ್ಯ ಸೋರಿಕೆಯಾಗಿದೆ ಎಂದು ವಾಹಿನಿಗಳು ಆ ದೃಶ್ಯವನ್ನು ಮೇಲಿಂದ ಮೇಲೆ ತೋರಿಸಿ ಈ ವಿಚಾರವಾಗಿ ರಾಷ್ಟ್ರೀಯ ಚರ್ಚೆ ನಡೆಸುವ ಮೂಲಕ ನಟಿಯ ಜತೆಗೆ ತಾವೂ ಬೆತ್ತಲೆಗೊಂಡವು. ಎಲ್ಲಾ ವಾಹಿನಿಗಳೂ ಪೈಪೋಟಿಗೆ ಬಿದ್ದವರಂತೆ ಈ ಅಸಹ್ಯ ದೃಶ್ಯವನ್ನು ತೋರಿಸಿ ನೈತಿಕವಾಗಿ ದಿವಾಳಿಗೊಂಡವು. ಈ ಪ್ರಸಾರ ನೋಡುತ್ತಿದ್ದರೆ ನಾವು ನಾಗರಿಕ ಸಮಾಜದಲ್ಲಿ ಬದುಕುತ್ತಿದ್ದೇವೆಯೇ ಎಂದು ಪ್ರಶ್ನೆ ಮಾಡಿಕೊಳ್ಳುವಂತಾಯಿತು. ನಮ್ಮ ದೃಶ್ಯ ಮಾಧ್ಯಮಗಳೇಕೆ ಹೀಗೆ ಆದವು? ನಾವು ಎಲ್ಲಿಗೆ ತಲುಪುತ್ತಿದ್ದೇವೆ? ಮನೆ, ಮನಗಳನ್ನು ಕಲುಷಿತ ಮಾಡುತ್ತಿರುವ ಈ ವಿಕೃತ ಸಂಸ್ಕೃತಿಗೆ ಕೊನೆಯೆಂದು?

ಒಂದಂತೂ ಸತ್ಯ. ಕಿರುತೆರೆಯ ವ್ಯವಹಾರಗಳು ಹದ್ದುಮೀರಿ ಹೋಗುತ್ತಿವೆ. ತುರ್ತಾಗಿ ಇದರ ನಿಯಂತ್ರಣ ಆಗಲೇ ಬೇಕಾಗಿದೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಮುಗಿಯದ ಕಥೆಗಳು

'ಗಂಗಾ' ಧಾರಾವಾಹಿಯಲ್ಲಿ ಅಜ್ಜಮ್ಮ ಗಂಗಾಳನ್ನು ಮನೆಗೆ ಸೇರಿಸಿಕೊಂಡಿದ್ದಾಯ್ತು. ಪೂಜಾ ಕೊಲೆ ಕೇಸಿನ ಸಮಸ್ಯೆ ಪರಿಹಾರವಾಯಿತು. 'ಗಾಂಧಾರಿ'ಯಲ್ಲಿ ತ್ರಿವೇಣಿ, ಅವರ ತಾಯಿಯ ಕುತಂತ್ರ ಬಯಲಾಗಿ ಚಿರುಗೆ ನಿಜಸಂಗತಿ ತಿಳಿಯಬೇಕು, 'ಅಗ್ನಿಸಾಕ್ಷಿ'ಯಲ್ಲಿ ಚಂದ್ರಿಕಾಳ ಮುಖವಾಡ ಕಳಚಿ ಸತ್ಯ ಸಂಗತಿ ತಿಳಿಯಬೇಕು, 'ನಮ್ಮ ಮನೆದೇವ್ರು' ನಲ್ಲಿ ಜಾನಕಿ–ಸೂರ್ಯ ಮದುವೆಯಾಗಿರುವ ಸಂಗತಿ ಮುಚ್ಚಿಟ್ಟು ಸೂರ್ಯ ಮರು ಮದುವೆಗೆ ಒಪ್ಪದ ಕಾರಣ (ಸೂರ್ಯ–ಜಾನಕಿ  ಮದುವೆಯಾದ ಸಂಗತಿ) ತಿಳಿಸದೆ ಪರದಾಡುವ ಬದಲು ನಿಜಸಂಗತಿ ತಿಳಿಸಿ ಎದುರಾಗುವ ಸಂದರ್ಭ ಎದುರಿಸುವ ಧೈರ್ಯ ತೋರಿಸಬೇಕು. ಈ ಧಾರಾವಾಹಿಗಳನ್ನು ನಿರ್ದೇಶಕರು ಯಾಕೋ ಮುಗಿಸುವ ಮನಸ್ಸು ಮಾಡುತ್ತಿಲ್ಲ ಎನಿಸುತ್ತದೆ.

ಸಣ್ಣ ಕಥೆಗಳನ್ನು ಆಧರಿಸಿದ ಅಥವಾ ಕಾದಂಬರಿಯಾಧಾರಿತ ಧಾರಾವಾಹಿಗಳು ಮೂಡಿ ಬಂದರೆ ವೀಕ್ಷಕರಿಗೂ ಆಸಕ್ತಿ ಮೂಡುತ್ತದೆ.

—ಸವಿ, ತುಮಕೂರು

## ಊಹೆ ಮೀರಿದ ಫಲಿತಾಂಶ

ಝೀ ಕನ್ನಡ ವಾಹಿನಿಯ ಜನಮನ ಸೂರೆಗೊಂಡ ಸರಿಗಮಪ ಸೀಜನ್ 13, ಸಂಗೀತ ಕಾರ್ಯಕ್ರಮ 21 ವಾರಗಳ ಕಾಲ ಪ್ರಸಾರವಾಗಿದೆ. ಪುಟ್ಟರಾಜು ಗವಾಯಿಗಳ ಸಂಗೀತ ಶಾಲೆಯ ಜೇವರ್ಗಿಯ ಸುನೀಲ  ಪ್ರಥಮ, ಧಾರವಾಡದ ಅಂಧ ಮೆಹಬೂಬ್ ಸಾಬ್ ದ್ವಿತೀಯ ಸ್ಥಾನ ಪಡೆದರು. ಪ್ರಾರಂಭದಿಂದಲೂ ತೀರ್ಪುಗಾರರ ಮನಸ್ಸನ್ನು ಗೆದ್ದಿದ್ದ ಮೈಸೂರಿನ ಶ್ರೀ ಹರ್ಷ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ನೇರ ಪ್ರಸಾರದ ನಂತರ ಜನತೆಯ ಎಸ್‌ಎಂಎಸ್‌ಗಳ ಆಧಾರದ ಮೇಲೆ ನೀಡಿದ ತೀರ್ಪನ್ನು ಗೌರವಿಸುತ್ತೇವೆಂದು ತೀರ್ಪುಗಾರರಾಗಿ ಬಂದ ನಾದಬ್ರಹ್ಮ ಹಂಸಲೇಖ ಅವರ ಹೇಳಿಕೆ ತೀರ್ಪಿನ ಕೈಗನ್ನಡಿ. ಎಸ್.ಎಂ.ಎಸ್. ಗಳೇ ವ್ಯಕ್ತಿಯ ಪ್ರತಿಭೆಯನ್ನು ನಿರ್ಧರಿಸುವುದಾದರೆ ತೀರ್ಪುಗಾರರೇಕೆ? ಜ್ಯೂರಿ ಏಕೆ ಬೇಕೆಂಬುದು ಪ್ರಶ್ನೆಯಾಗುತ್ತದೆ. ನೈಜ ಪ್ರತಿಭಾವಂತರು ಸ್ಪರ್ಧೆಯಿಂದ ದೂರ ಉಳಿಯಬಹುದು. ಇದನ್ನು ನಿರೀಕ್ಷಿಸಿರಲಿಲ್ಲ.

ಸ್ಪರ್ಧಿಗಳು ಆರಂಭದಿಂದಲೂ ಉತ್ತಮ ಪೈಪೋಟಿ ನೀಡಿದ ಹಿನ್ನೆಲೆಯನ್ನು ಗಮನಿಸಿದರೆ ತೀರ್ಪುಗಾರರಿಂದಲೇ ಸಂಗೀತ ಜ್ಞಾನಕ್ಕೆ ಹಾಗೂ ತಾಂತ್ರಿಕ ಪರಿಣತಿಗೆ ಮಾತ್ರ ಅಂತಿಮ ಘಟ್ಟದಲ್ಲಿಯೂ  ಮನ್ನಣೆ ದೊರೆಯಬಹುದೆಂಬ ನಿರೀಕ್ಷೆ ಕೊಂಚಮಟ್ಟಿಗೆ ಹುಸಿಯಾಗಿರುವುದು ಕೇವಲ ಸ್ಪರ್ಧಿಗಳಿಗೆ ಮಾತ್ರವಲ್ಲ, ವೀಕ್ಷಕರಿಗೂ ನಿರಾಸೆ ಮೂಡಿಸಿದೆ,

ತೀರ್ಪುಗಾರರಾಗಿ ವಿಜಯ ಪ್ರಕಾಶ್, ಅರ್ಜುನ ಜನ್ಯ, ರಾಜೇಶ್ ಕೃಷ್ಣನ್ ಮತ್ತು ನಿರೂಪಕಿಯಾಗಿ ಮಾತಿನ ಮಲ್ಲಿ ಅನುಶ್ರೀ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ದಯಮಾಡಿ ಮುಂದಿನ ಎಪಿಸೋಡ್‌ಗಳಲ್ಲಿ ಜನರ ಆಯ್ಕೆಗೆ ಮಾನ್ಯತೆ ಇರಲಿ. ಬಹುಶಃ ಸುನೀಲನ ಬದಲು ಮೆಹಬೂಬ್ ಆಯ್ಕೆ ಆಗಿದ್ದರೆ ಅದೊಂದು ಉತ್ತಮ ಸಂದೇಶ ಆಗುತ್ತಿತ್ತೇನೋ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ, ಸೀತಾ ಕೇಶವ, ಸಿಡ್ನಿ,
ಎಸ್.ಎನ್. ಕೃಷ್ಣಮೂರ್ತಿ, ಚಿಕ್ಕಮಗಳೂರು,
ವಿಭಾ ಮುರಳೀಧರ್, ತುಮಕೂರು, ರಾಜೀವ್ ಮಾಗಲ್,
ಉಮಾ ಪಿ.ಆರ್.ಸಾಗರ, ಎಸ್.ಶಿವಲಿಂಗೇಗೌಡ, ಬೆಂಗಳೂರು.

## ಸದಭಿರುಚಿಯ ಡ್ರಾಮಾ

ಡ್ರಾಮಾ ಜ್ಯೂನಿಯರ್ ಮೊದಲನೆಯ ಸೀಜನ್ ಯಶಸ್ವಿಯಾಗಿ ಮುಕ್ತಾಯಗೊಂಡ ನಂತರ, ಎರಡನೆಯ ಸೀಜನ್ನನ್ನು ಬೇಗನೆ ಆರಂಭಿಸುವಂತೆ ಜಾಣರ ಪೆಟ್ಟಿಗೆಯಲ್ಲಿ ಪತ್ರಗಳು ಬಂದಿದ್ದವು. ಬಹುದಿನಗಳ ನಿರೀಕ್ಷೆಯ ನಂತರ ಡ್ರಾಮಾ ಜ್ಯೂನಿಯರ್ ಎರಡನೆಯ ಸೀಜನ್ ಜುಲೈ 22 ರಂದು ಆರಂಭಗೊಂಡಿದೆ. ಅದೇ ತೀರ್ಪುಗಾರರು, ಅದೇ ಆ್ಯಂಕರ್ ಮತ್ತು ಅದೇ ವೇದಿಕೆ. ಮಕ್ಕಳು ಮಾತ್ರ ಹೊಸಬರು. ಜುಲೈ 22 ರಂದು ಪ್ರಸಾರವಾದ ಎಪಿಸೋಡ್‌ನಲ್ಲಿ ಅಭಿನಯಿಸಿದ ಏಳು ಮಕ್ಕಳಲ್ಲಿ ಐದು ಮಕ್ಕಳು ಆಯ್ಕೆಯಾದದ್ದು ಎರಡನೆಯ ಸೀಜನ್ ಕೂಡ ಮೊದಲನೆಯ ಸೀಜನ್ನಿನಷ್ಟೇ ಯಶಸ್ವಿಯಾಗಬಹುದೆಂಬ ಮುನ್ಸೂಚನೆಯನ್ನು ನೀಡಿದೆ. ಕನ್ನಡದ ಹೆಚ್ಚಿನ ಚಾನೆಲ್‌ಗಳು ಧಾರಾವಾಹಿಗಳ ಪ್ರಸಾರಕ್ಕೆ ಮಾತ್ರ ಸಿಮೀತಗೊಂಡಿರುವಾಗ ಝೀ  ಮಾತ್ರ ಸದಭಿರುಚಿಯ ಕಾರ್ಯಕ್ರಮಗಳನ್ನು ನೀಡುತ್ತಿದೆ. ಡ್ರಾಮಾ ಜ್ಯೂನಿಯರ್, ಲಿಟ್ಲ್ ಚಾಂಪ್, ಸರಿಗಮಪ ಮತ್ತು ವೀಕೆಂಡ್ ವಿತ್ ರಮೇಶ್ ರೀತಿಯ ಅತ್ಯುತ್ತಮ ಕಾರ್ಯಕ್ರಮಗಳು.

– ಮುರಲೀಧರ ಕುಲಕರ್ಣಿ ಬೀದರ್, ಉಪ್ಪುಂದ,
ಲಕ್ಷ್ಮೀ ನಾರಾಯಣ ಹೆಗಡೆ ಬೆಂಗಳೂರು, ಕೆ.ಜಿ. ವೀಣಾ ಶಿವಮೊಗ್ಗ,
ಶಿವಲಿಂಗೇಗೌಡ ಬೆಂಗಳೂರು